# III Year B.A. (DCC) Examination, January 2018
## (Fresh) (2015-16 and Onwards)
## ಐಚ್ಛಿಕ ಕನ್ನಡ – III
## ಪ್ರಾಚೀನ ಕಾವ್ಯ ಮತ್ತು ಆಧುನಿಕ ಗದ್ಯ

Time : 3 Hours                                                                 Max. Marks : 100

*ಸೂಚನೆಗಳು: ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆಯಬೇಕು.*

೧. ಅ) **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ : (೧×೫=೫)

೧) ಅಮೃತಮತಿಯೆತ್ತ ರೂಪಾ
ಧಮನಷ್ಟಾವಂಕನೆತ್ತ ಚಿತ್ತಮಪಾತ್ರೇ
ರಮತೇ ನಾರೀ ಎಂಬುದು
ಸಮನಿಸುದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

೨) ಭೈರವನ ಜವನ ಮಾರಿಯ
ಮೂರಿಯವೊಲ್ ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ತಕ್ಕುಗೊಂಡಂತಿರ್ದಂ.

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : (೨×೫=೧೦)

೧) ಜನ್ನ
೨) ಚಂಡಮಾರಿ
೩) ಅಭಯರುಚಿ
೪) ಸುದತ್ತಾಚಾರ್ಯ.

ಇ) **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (೨×೧೦=೨೦)

೧) ಅಭಯ ರುಚಿ, ಅಭಯ ಮತಿ ಕಂಡ ಮಾರಿಗುಡಿಯ ಭಯಂಕರತೆಯು ಜಾತ್ರೆಯ ಭಾಗವಾಗಿತ್ತೋ ? ಭಯವನ್ನು ಬಿತ್ತುವಷ್ಟು ಭೀಕರವಾಗಿತ್ತೋ ? ವಿಶ್ಲೇಷಿಸಿ.

೨) 'ಒಲವಾದೊಡೆ ರೂಪಿನ ಕೋಟಲೆಯೇವುದೊ ' ಈ ಹೇಳಿಕೆಯ ಆಧಾರದಿಂದ ಅಮೃತಮತಿ – ಅಷ್ಟಾವಂಕರ ಸಂಬಂಧವನ್ನು ಚರ್ಚಿಸಿ.

೩) ಆಧುನಿಕ ಮಹಿಳೆಯ ಬಯಕೆ, ತೊಳಲಾಟ, ಸಮಸ್ಯೆ, ಸಂದಿಗ್ಧಗಳ ಹಿನ್ನೆಲೆಯಲ್ಲಿ ಅಮೃತಮತಿಯ ಪಾತ್ರವನ್ನು ವಿಮರ್ಶಿಸಿ.

೪) ಯಶೋಧರ, ಅಮೃತಮತಿಯರ ದಾಂಪತ್ಯದಲ್ಲಿ ಸಾಮರಸ್ಯದ ಕೊರತೆಯಿತ್ತೆ ? ಚರ್ಚಿಸಿ.

೨. ಅ) **ಒಂದು** ಪದ್ಯಕ್ಕೆ ಭಾವಾರ್ಥ ಬರೆಯಿರಿ : (೧×೫=೫)

೧) ನೀನಗ್ನಿಪುತ್ರಿಯಯ್ ಪವ

ಮಾನತನೂಭವನೆನಾನಣಂ ಕೂಡಿರೆ ಸಂ

ಧಾನಮರಿನೃಪರೊಳೆಂತನ

ಲಾನಿಲ ಸಂಯೋಗಮುರಿಪದಿರ್ಕುಮೆ ಪಗೆಯಂ

೨) ಆನಂ ದುಶ್ಯಾಸನುಂ

ನೀನುಂ ಮೂವರೆದಲಾತನುಂ ಕಟೆದ ಬಟೆ

ಕ್ಕಾನುಂ ನೀನೆದಲೀಗಳ್

ನೀನುಮಗಲ್ದೆತ್ತವೋದೆಯಂಗಾಧಿಪತೀ.

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : (೨×೫=೧೦)

೧) ಕುರುಕ್ಷೇತ್ರ ರಣಾಂಗಣ

೨) ಕರ್ಣ

೩) ಸಂಜಯ

೪) ಮರುಳುಗಳು.

ಇ) **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (೨×೧೦=೨೦)

೧) 'ದುರ್ಯೋಧನ ಹೃದಯವಂತಿಕೆ ಇರುವ ಸಹೃದಯಿ' ಎಂಬುದನ್ನು ಅಭಿಮನ್ಯುವಿನ ಹೆಣವನ್ನು ಯುದ್ಧಭೂಮಿಯಲ್ಲಿ ನೋಡಿದ ಪ್ರಸಂಗದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

೨) ದುರ್ಯೋಧನನ ಕೊನೆಯ ಆಸೆ ಯಾವುದು ? ಅದನ್ನು ಈಡೇರಿಸಲು ಅಶ್ವತ್ಥಾಮ ಮಾಡಿದ ಪ್ರಯತ್ನವನ್ನು ಬರೆಯಿರಿ.

೩) ರನ್ನನು ಚಿತ್ರಿಸಿರುವ ಭೀಮ ಮತ್ತು ದ್ರೌಪದಿ ಪಾತ್ರಗಳ ವಿಶೇಷತೆಗಳನ್ನು ವಿಶ್ಲೇಷಿಸಿ.

೪) ಗದಾಯುದ್ಧ ಕಾವ್ಯದಲ್ಲಿ ಪ್ರತಿಪಾದಿತವಾಗಿರುವ ನಾಟಕೀಯ ಅಂಶಗಳನ್ನು ಪರಿಚಯಿಸಿ.

೩. ಅ) **ಎರಡನ್ನು** ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ : (೨×೫=೧೦)

೧) ಮನೆಯಿಂದ ಹೊರಟ ತಿಮ್ಮಿ ಗುತ್ತಿಯೊಡನೆ ಹೋದ ಪ್ರಸಂಗ.

೨) ಕುರ್ಕನ ದಾಳಿಗೆ ತುತ್ತಾಗಿದ್ದ ಹುಲಿಯನಿಗೆ ಕಾಡಿಯ ಚಿಕಿತ್ಸೆ.

೩) 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕುರಿತು ಕುವೆಂಪು ಅಭಿಪ್ರಾಯ.

೪) ಕೆರೆಯ ಕಂಪದಲ್ಲಿ ಮಾನನಾಯಕ ಸಿಲುಕಿದ ಸನ್ನಿವೇಶ.

ಆ) **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (೨×೧೦=೨೦)

೧) ಗುತ್ತಿಯು ತಿಮ್ಮಿಯನ್ನು ಮದುವೆಯಾದ ಹಿನ್ನೆಲೆಯನ್ನು ವಿಶ್ಲೇಷಿಸಿ.

೨) ಕ್ರೈಸ್ತ ಮತದತ್ತ ಜನರನ್ನು ಸೆಳೆಯಲು ನೇಟಿವ್‌ಪಾದ್ರಿ ಜೀವರತ್ನಯ್ಯ ತೋರಿದ ಆಮಿಷಗಳಾವುವು ? ವಿವರಿಸಿ.

೩) ಮಲೆಗಳಲ್ಲಿ ಮದುಮಗಳು ಕಾದಂಬರಿಯ ಸ್ತ್ರೀಪಾತ್ರಗಳು ನಿರ್ವಹಿಸುವ ಸಾಮಾಜಿಕ ಜವಾಬ್ದಾರಿಯನ್ನು ವಿಶ್ಲೇಷಿಸಿ.

೪) ದೇವಯ್ಯಗೌಡನ ಬೀಸೆಕಲ್ಲು ಸಾಹಸದ ಸ್ವಾರಸ್ಯವನ್ನು ವಿವರಿಸಿ.

---